**ಸಾಕ್ಷಿಗೆ ದಿನಾಂಕ 06-08-2026 ರಂದು -ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು: 2 ನೇ ಎದುರುದಾರರ ಪರ ಶ್ರೀ.ಹೆಚ್ ಕೆ ಆರ್ ವಕೀಲರಿಂದಃ**

1. ನಾನು ಈ ಅಪಘಾತವನ್ನು ನೋಡಿರುವುದಿಲ್ಲ ಎಂದರೆ ಸರಿ. ಅಪಘಾತದ ಕುರಿತು ದೂರನ್ನು ನಾನು ನೀಡಿರುವುದಿಲ್ಲ. ನನ್ನ ಮೃತ ಮಗ ಹರ್ಷ ರವರು ಅಪ್ರಾಪ್ತ ವಯಸ್ಕನಾಗಿದ್ದರಿಂದ ಅವರಿಗೆ ಯಾವುದೇ ಡಿಎಲ್ ಇರಲಿಲ್ಲ ಎಂದರೆ ಸರಿ. ನನ್ನ ಮೃತ ಮಗ ಹರ್ಷನ ಸ್ನೇಹಿತ ಸಚಿನ್ ಸಹ ಅಪ್ರಾಪ್ತನಾಗಿದ್ದರಿಂದ ಅವರಿಗೂ ಸಹ ಡಿಎಲ್ ಇರಲಿಲ್ಲ ಎಂದರೆ ಸರಿ. ಅಪಘಾತದ ದಿನ ನನ್ನ ಮೃತ ಮಗ ಹರ್ಷ ಮತ್ತು ಸಚಿನ್ ಸವಾರಿ ಮಾಡುತ್ತಿದ್ದ ದ್ವಿಚಕ್ರ ವಾಹನ ಸಚಿನ್ ರವರ ತಂದೆಗೆ ಸೇರಿರುತ್ತದೆ. ಸದರಿ ದ್ವಿಚಕ್ರ ವಾಹನಕ್ಕೆ ಇದ್ದ ವಿಮಾ ಪಾಲಿಸಿಯನ್ನು ನಾನು ನೋಡಿರುವುದಿಲ್ಲ. ಅಪಘಾತದ ಸಮಯದಲ್ಲಿ ನನ್ನ ಮೃತ ಮಗ ಹರ್ಷ ಮತ್ತು ಸಚಿನ್ ರವರು ಹೆಲ್ಮೆಟ್ ಧರಿಸಿದ ಬಗ್ಗೆ ನಾನು ಪೊಲೀಸರಿಗೆ ಹೇಳಿಕೆ ನೀಡಿರುವುದಿಲ್ಲ ಎಂದರೆ ಪೊಲೀಸರು ಕೇಳಿರುವುದಿಲ್ಲ ಹಾಗಾಗಿ ನಾನು ಅದರ ಬಗ್ಗೆ ಹೇಳಿರುವುದಿಲ್ಲ. ಸಾಕ್ಷಿ ಮುಂದುವರೆದು ಮನೆಯಿಂದ ಹೆಲ್ಮೆಟ್ ನ್ನು ಹಾಕಿಕೊಂಡು ಹೋಗಿದ್ದರು.

2. ನಾನು ಹಾಜರುಪಡಿಸಿರುವ ಪೊಲೀಸ್ ದಾಖಲೆಗಳಲ್ಲಿ ಏನು ಬರೆಯಲಾಗಿದೆ ಎಂದು ಓದಿ ತಿಳಿದುಕೊಂಡಿರುವುದಿಲ್ಲ ಎಂದರೆ ಸರಿ. ಈ ಅಪಘಾತದಲ್ಲಿ ನನ್ನ ಮೃತ ಮಗ ಹರ್ಷನ ತಲೆಗೆ ತೀವ್ರವಾದ ಗಾಯಗಳು ಆಗಿವೆ ಎಂದರೆ ಕೈಗೆ ಮತ್ತು ಕಾಲಿಗೂ ಸಹ ಗಾಯಗಳು ಆಗಿದ್ದವು. ಈ ಅಪಘಾತವನ್ನು ಸಚಿನ್ ಮತ್ತು ಸುತ್ತ-ಮುತ್ತಲಿನ ಸಾರ್ವಜನಿಕರು ನೋಡಿರುತ್ತಾರೆ. ಈ ಅಪಘಾತವನ್ನು ಕಣ್ಣಾರೆ ನೋಡಿದ ವ್ಯಕ್ತಿಗಳ ಹೇಳಿಕೆಯಲ್ಲಿ ನನ್ನ ಮೃತ ಮಗ ಹರ್ಷ ಮತ್ತು ಸಚಿನ್ ರವರು ದ್ವಿಚಕ್ರ ವಾಹನವನ್ನು ಅತೀವೇಗದಿಂದ ಸವಾರಿ ಮಾಡಿಕೊಂಡು ಮುಂದೆ ಹೋಗುತ್ತಿದ್ದ ವಾಹನವನ್ನು ಹಿಂದಿಕ್ಕಲು

ಹೋಗಿ, ರಸ್ತೆ ವಿಭಜಕಕ್ಕೆ ಡಿಕ್ಕಿಪಡಿಸಿಕೊಂಡಿರುತ್ತಾರೆ ಎಂದು ನಮೂದು ಇದೆ ಎಂದರೆ ಸರಿಯಲ್ಲ. ಸದರಿ ವಿಚಾರಕ್ಕೆ ಸಂಬಂಧಿಸಿದಂತೆ ಸಚಿನ್ ಅಥವಾ ಪ್ರತ್ಯಕ್ಷ ಸಾಕ್ಷಿದಾರರ ಸಾಕ್ಷ್ಯ ಮಾಡಿಸಲು ತೊಂದರೆ ಇದೆಯಾ ಎಂದರೆ ತೊಂದರೆ ಇಲ್ಲ.

3. ಪೊಲೀಸರು ಯಾರ ವಿರುದ್ಧ ದೋಷಾರೋಪಣಾ ಪತ್ರ ಸಲ್ಲಿಸಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಪೊಲೀಸ್ ದಾಖಲೆಗಳ ಪ್ರಕಾರ ಸಚಿನ್ ದ್ವಿಚಕ್ರ ವಾಹನವನ್ನು ಚಾಲನೇ ಪರವಾನಗಿ ಪತ್ರ ಇಲ್ಲದೇ, ಹೆಲ್ಮೆಟ್ ಧರಿಸದೇ, ಅತೀವೇಗ ಮತ್ತು ಅಜಾಗರೂಕತೆಯಿಂದ ಸವಾರಿ ಮಾಡಿ ರಸ್ತೆ ವಿಭಜಕಕ್ಕೆ ಡಿಕ್ಕಿಪಡಿಸಿಕೊಂಡಿರುತ್ತಾನೆ ಎಂದರೆ ಸರಿಯಲ್ಲ. ದ್ವಿಚಕ್ರ ವಾಹನದ ಮಾಲೀಕರಾದ ಸಚಿನ್ ತಂದೆಯವರನ್ನು ಮತ್ತು ಅದರ ವಿಮಾ ಕಂಪನಿಯನ್ನು ಪಕ್ಷಗಾರರನ್ನಾಗಿ ಮಾಡಲು ತೊಂದರೆ ಇದೆಯಾ ಎಂದರೆ ಸಚಿನ್ ರವರ ತಂದೆ ತೀರಿಕೊಂಡಿರುತ್ತಾರೆ. ಸಚಿನ್ ಗೆ ಡಿಎಲ್ ಇಲ್ಲದೇ ಇದ್ದೂದರಿಂದ ಮತ್ತು ದ್ವಿಚಕ್ರ ವಾಹನಕ್ಕೆ ವಿಮೆ ಇಲ್ಲದೇ ಇರುವುದರಿಂದ, ಒಂದನೇ ಎದುರುದಾರರ ವಾಹನದ ವಿರುದ್ಧ ಸುಳ್ಳು ದೂರು ನೀಡಿರುತ್ತೇವೆ ಎಂದರೆ ಸರಿಯಲ್ಲ.

4. ಅಪಘಾತದ ಸಮಯದಲ್ಲಿ ನನ್ನ ಮೃತ ಮಗ ಹರ್ಷ ಎಸ್ ಎಸ್ ಎಲ್ ಸಿ ವಿಧ್ಯಾಭ್ಯಾಸ ಮಾಡುತ್ತಿದ್ದನು. ನನ್ನ ಮೃತ ಮಗ ಹರ್ಷ ತನಿಷ್ ಜ್ಯೂಯಲರಿ ಅಂಗಡಿಯಲ್ಲಿ ಕೆಲಸ ಮಾಡಿ ಪ್ರತಿತಿಂಗಳು ರೂ.25,000/- ಸಂಪಾದನೆ ಮಾಡುತ್ತಿದ್ದನು ಎಂದು ತೋರಿಸಲು ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿ. ನನ್ನ ಮೃತ ಮಗ ಹರ್ಷ ರವರು ಅಪ್ರಾಪ್ತನಾಗಿದ್ದರಿಂದ ಆತನಿಗೆ ಯಾರು ಸಹ ಕೆಲಸ ನೀಡಿರಲಿಲ್ಲ ಮತ್ತು ಯಾವುದೇ ಸಂಪಾದನೆ ಮಾಡುತ್ತಿರಲಿಲ್ಲ ಎಂದರೆ ಸರಿಯಲ್ಲ.

5. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದ 5ನೇ ಖಂಡಿಕೆಯಲ್ಲಿ ನಮೂದು ಮಾಡಿರುವ ಅಂಶಗಳು ಸುಳ್ಳಿನಿಂದ ಕೂಡಿವೆ ಎಂದರೆ ಸರಿಯಲ್ಲ. ಪೊಲೀಸರೊಂದಿಗೆ ಶಾಮೀಲಾಗಿ

ನಮ್ಮ ಅನುಕೂಲಕ್ಕೆ ತಕ್ಕಂತೆ ದಾಖಲೆಗಳನ್ನು ಸೃಷ್ಟಿಸಿರುತ್ತೇವೆ ಎಂದರೆ ಸರಿಯಲ್ಲ. ಪರಿಹಾರ ಪಡೆಯುವ ಉದ್ದೇಶದಿಂದ ಸುಳ್ಳು ಪ್ರಮಾಣ ಪತ್ರವನ್ನು ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

**(ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲ್ಪಟ್ಟಿದೆ.)**

**(ಓ. ಹೇ. ಕೇ. ಸ.ಇ)**

(ಧನೇಶ್ ಮುಗಳಿ)

**3ನೇ ಹೆಚ್ಚುವರಿ ಲಘು ವ್ಯವಹಾರಗಳ**

**ನ್ಯಾಯಾಧೀಶರು, ಬೆಂಗಳೂರು.**